ಈ) ಜ್ಯೂನಿಯರ್ ಕಾಂಪೊಸಿಟ್ ಪ್ರೌಢಶಾಲೆಗಳನ್ನು ರಾಜ್ಯದಾದ್ಯಂತ ಪ್ರಾರಂಭ ಮಾಡಲು ಬರಬಹುದಾದ ಖರ್ಚಿನ ವೊತ್ತವೆಷ್ಟು ?

ಉ) ಏನೇ ತರಗತಿಯನ್ನು ಜ್ಯೂನಿಯರ್ ಪ್ರೌಢಶಾಲೆಯಾಗಿ ಮಾಡಲು ಯಾರಿಂದಾದರೂ ಸರ್ಕಾರಕ್ಕೆ ಮನವಿ ಬಂದಿದೆಯೇ ?

ಶ್ರೀ ಎಂ. ರಘುಪತಿ(ಶಿಕ್ಷಣ ಸಚಿವರು).—

ಅ) ೧೧೪೦ ಶಾಲೆಗಳು.

ಆ) ಸಧ್ಯಕ್ಕೆ ಇಂಥಹ ಪ್ರಸ್ತಾವನೆಯು ಇಲಾಖೆಯಂ ಮುಂದಿಲ್ಲ.

ಇ) ಹಲವು ಆಡಳಿತಾತ್ಮಕ ಹಾಗೂ ಆರ್ಥಿಕ ಕಾರಣಗಳಿಂದ ಇದು ಸಾಧ್ಯವಾಗುವುದಿಲ್ಲ.

ಈ) ವೊದಲನೆ ವರ್ಷ ರೂ. ೯, ೫೧, ೨೪, ೬೦೦ ಎರಡನೇ ವರ್ಷ ರೂ. ೧೧. ೧೪. ೯೨.೦೦೦ ಮೂರನೇ ವರ್ಷ ಮತ್ತು ನಂತರದ ಪ್ರತಿ ವರ್ಷ ರೂ. ೨೨, ೬೪, ೮೪,೦೦೦ ವೆಚ್ಚವಾಗುವುದು.

ಉ) ಹೌದು ಬಂದಿದೆ.

ನೀರಿನ ಸರಬರಾಜು ಯೋಜನೆ

೩೮೦ ಶ್ರೀ ಕೆ. ಬಿ. ಶಾಣಪ್ಪ (ಹಹಾಬಾದ್).—ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು? ಉತ್ತರಿಸುವರೆ ?

ಅ) ೧೯೮೫ ರ ಮೇ ತಿಂಗಳವರೆಗೆ ಶಾಹಾಬಾದ್ ಕ್ಷೇತ್ರದಲ್ಲಿ ಒಟ್ಟು ಎಷ್ಟು ಹಳ್ಳಿಗಳಲ್ಲಿ ಕೊಳವೆ ಬಾವಿಗಳನ್ನು ಹಾಕಲಾಗಿದೆ.

ಆ) ಆ ಪೈಕಿ ಯಶಸ್ವಿಯಾದ ಹಾಗೂ ವಿಫಲಗೊಂಡ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ? ಈ ಬಗ್ಗೆ ರಾಜ್ಯಸರ್ಕಾರದಿಂದ ಹಾಗೂ ಕೇಂದ್ರದ ವತಿಯಿಂದ ವೆಚ್ಚ ಮಾಡಲಾದ ವೊತ್ತವೆಷ್ಟು ?

ಇ) ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯನ್ನು ಕೈಗೊಂಡಿರುವ ಗ್ರಾಮಗಳ ಪೈಕಿ ಅರ್ಧದಷ್ಟು ಹಳ್ಳಿಗಳಿಗೆ ಪೈಪಿನ ಮೂಲಾಂತರ ನೀರು ಸರಬರಾಜು ಮಾಡುತ್ತಿದ್ದು ಇನ್ನುಳಿದ ಅರ್ಧದಷ್ಟು ಹಳ್ಳಿಗಳಿಗೆ ಈ ಸೌಕರ್ಯವನ್ನೊದಗಿಸಲು ಸರ್ಕಾರ ಯಾವ ಯೋಜನೆಯನ್ನು ಹಾಕಿಕೊಂಡಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಪಕ್ಷ ಸಚಿವರು).—

ಅ) ೯೮ ಹಳ್ಳಿಗಳಲ್ಲಿ ೬೯೨ ಕೊಳವೆ ಬಾವಿಗಳನ್ನು ಹಾಕಲಾಗಿದೆ.

ಆ) ೨೧೦ ಕೊಳವೆ ಬಾವಿಗಳು ಯಶಸ್ವಿಯಾಗಿದ್ದು ೮೨ ಕೊಳವೆ ಬಾವಿಗಳು ವಿಫಲಗೊಂಡಿವೆ.

ಇ) ರಾಜ್ಯ ಸರ್ಕಾರದಿಂದ ೩೮. ೩೪ ಲಕ್ಷ ರೂಪಾಯಿಗಳೂ, ಕೇಂದ್ರ ಸರ್ಕಾರದಿಂದ ೧೪.೨೨ ಲಕ್ಷ ರೂಪಾಯಿಗಳು ವೆಚ್ಚವಾಗಿದೆ.

ಈ) ಪರಿಶೀಲಿಸಲಾಗುವುದು.

ರಾಜ್ಯದಲ್ಲಿರುವ ಗ್ರಾಮ ಸಹಾಯಕರು

೩೫೪. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಗ್ರಾಮ ಸಹಾಯಕರ ಸಂಖ್ಯೆ ಎಷ್ಟು ?

ಅ) ಆ ಪೈಕಿ ಬಹುತೇಕ ಮಂದಿ ಹರಿಜನ ಗಿರಿಜನರೇ ಆಗಿರುವುದು ನಿಜವೇ ?

ಇ) ಅವರಿಗೆ ತಿಂಗಳಿಗೆ ಕೊಡುತ್ತಿರುವ ಸಂಬಳ ಭತ್ಯ ಇತ್ಯಾದಿ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ ಮಂತ್ರಿಗಳು).—

ಅ) ೧೦,೪೫೦

ಆ) ಹೌದು

ಇ) ತಿಂಗಳೊಂದಕ್ಕೆ ೧೨೦-೦೦ ರೂ.ಗಳ ಸಂಭಾವನೆಯನ್ನು ಕೊಡಲಾಗುತ್ತಿದೆ.

ದಾವಣಗೆರೆ ನಗರದಲ್ಲಿನ ಕಾಲೇಜುಗಳು.

೫೨೦. ಶ್ರೀ ವಂಪಾಪತಿ (ದಾವಣಗೆರೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಾವಣಗೆರೆ ನಗರದಲ್ಲಿರುವ ಕಾಲೇಜುಗಳ ಸಂಖ್ಯೆ ಎಷ್ಟು ಹಾಗೂ ಸದರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಅನುಗುಣವಾಗಿ ಅಧ್ಯಾಪಕರುಗಳು ಇದ್ದಾರೆಯೇ ಹಾಗೂ ಕೊಠಡಿಗಳು ಇವೆಯೇ ?

ಆ) ಹಾಗಿಲ್ಲದಿದ್ದಲ್ಲಿ ಸರಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ರಘುಪತಿ(ಶಿಕ್ಷಣ ಸಚಿವರು).—

ಅ) ಆರು ಕಾಲೇಜುಗಳು, ಈ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಅನುಗುಣವಾಗಿ ಅಧ್ಯಾಪಕರು ಮತ್ತು ಕೊಠಡಿಗಳು ಇವೆ.

ಆ) ಉದ್ಭವಿಸುವುದಿಲ್ಲ.

ಗ್ರಾಮಾಂತರ ಪ್ರದೇಶದಲ್ಲಿ ಮಹಿಳಾ ಶೌಚಾಲಯಗಳನ್ನು ನಿರ್ಮಿಸುವುದು.

೫೫೫. ಶ್ರೀ ಜ್ಞಾನದೇವದೊಡ್ಡಮೇಟಿ (ರೋಣ).—ಮಾನ್ಯ ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಬಕ್ಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ರಾಜ್ಯದ ಪ್ರತಿ ಗ್ರಾಮದಲ್ಲಿಯೂ ಮಹಿಳೆಯರಿಗೆ ಶೌಚಾಲಯಗಳಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಪ್ರತಿ ಗ್ರಾಮಕ್ಕೂ ಮಹಿಳಾ ಶೌಚಾಲಯಗಳನ್ನು ಆದ್ಯತೆಯ ಮೇಲೆ ಕಟ್ಟುವ ಯೋಜನೆ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ ಈ ಕಾರ್ಯಕ್ರಮವನ್ನು ಕೂಡಲೇ ಜಾರಿಗೆ ತರಲಾಗುವುದೇ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಹಕ್ಕ ಮಂತ್ರಿಗಳು)—

ಅ) ಹೌದು.

ಆ) ಇದೆ.

ಇ) ಈ ದಿಸೆಯಲ್ಲಿ ಕಾರ್ಯಕ್ರಮವನ್ನು ಹಂತಹಂತವಾಗಿ ಜಾರಿಗೆ ತರಲಾಗುವುದು.